**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 996/2018** **PW**-2

**ಸಾಕ್ಷಿಯನ್ನು ದಿಃ 18.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಕೆ ಎನ್ ಸುಂದರ್ ರಾಜ್ |
| ತಂದೆಯ ಹೆಸರುಃ | ಕೆ ಯು ನಾಗರಾಜ್ |
| ವಯಸ್ಸುಃ | 44 ವರ್ಷ |
| ವೃತ್ತಿಃ | ವಕೀಲರು |
| ವಾಸ ಸ್ಥಳಃ | ಕುವೆಂಪು ನಗರ ,ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಪಿರ್ಯಾದಿ ಪರ ಶ್ರೀ ಬಿ ಜಿ ಆರ್ ವಕೀಲರಿಂದ ಃ**

ಆರೋಪಿತರು ನನಗೆ ಗೊತ್ತು. ನನ್ನ ತಂದೆ 1997 ರಲ್ಲಿ ಚನ್ನರಾಯಪಟ್ಟಣದ ಕುವೆಂಪು ನಗರದಲ್ಲಿ ಒಂದು ಖಾಲಿ ನಿವೇಶನ ಪೂರ್ವ ಪಶ್ಚಿಮ 60 ಅಡಿ ಉತ್ತರ ದಕ್ಷಿಣ 43 + 33 ಅಡಿ ವಿಸ್ತೀರ್ಣದ ಖಾಲಿ ನಿವೇಶನವನ್ನು ಖರೀದಿ ಮಾಡಿದ್ದು, ಅದು ನನ್ನ ತಂದೆಯ ಹೆಸರಿಗೆ ಪುರಸಭೆಯಲ್ಲಿ ಖಾತೆ ಆಗಿರುತ್ತದೆ. ಸದರಿ ನಿವೇಶನದಲ್ಲಿ ನನ್ನ ತಂದೆ ಒಂದು ಮನೆಯನ್ನು ನಿರ್ಮಿಸಿದ್ದು, ಮನೆಯ ದಕ್ಷಿಣ ದಿಕ್ಕಿಗೆ 60X13 ಅಡಿ ವಿಸ್ತೀರ್ಣದ ಖಾಲಿ ಉಳಿಕೆ ಜಾಗವನ್ನು ಬಿಟ್ಟಿರುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ 1, 2, 8 ಮತ್ತು 9 ರವರ ವಿರುದ್ಧ ಹಕ್ಕು ಘೋಷಣೆ ಪರಿಹಾರ ಕೋರಿ ಅ.ದಾ.ಸಂ.38/2008 ಹೂಡಿದ್ದು ಸದರಿ ದಾವೆಯಲ್ಲಿ ನನ್ನ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ಹೊರಡಿಸಿದ್ದು, ಅದರ ಜಾರಿಗಾಗಿ ಪೊಲೀಸ್ ರಕ್ಷಣೆ ಆದೇಶವನ್ನು ಸಹ ಮಾಡಲಾಗಿತ್ತು. ಆದರೆ ದಿನಾಂಕ 14.08.2013 ರಂದು ಎಲ್ಲಾ ಆರೋಪಿತರು ನಮ್ಮ ತಂದೆಯ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ, ಮನೆಯ ಬಳಿ ಬಂದು ಮನೆ ನಿರ್ಮಿಸಿ ಬಿಟ್ಟಿರುವ ಉಳಿದ ಜಾಗವನ್ನು ರಸ್ತೆಗೆ ಬಿಡುವಂತೆ 1 ಮತ್ತು 2ನೇ ಆರೋಪಿತರು ಒಂದು ನಕ್ಷಯನ್ನು ಸೃಷ್ಟಿಸಿಕೊಂಡು ಅವರ ಸಂಬಂಧಿಕರ ಮನೆಗೆ ಹೋಗಲು ಅನುಕೂಲವಾಗಲಿ ಎಂದು ಖಾಲಿ ಜಾಗವನ್ನು ಹೊಡೆದುಕೊಳ್ಳುವ ಉದ್ದೇಶದಿಂದ

ರಸ್ತೆಯನ್ನು ತೋರಿಸಿ 1 ನೇ ಆರೋಪಿ ಅಲ್ಲಿದ್ದ ಸಾರ್ವಜನಿಕರಿಗೆ ಮತ್ತು ಉಳಿದ ಆರೋಪಿತರೆಲ್ಲರಿಗೂ ಪ್ರಚೋದಿಸಿರುತ್ತಾರೆ. ಉಳಿಕೆ ಜಾಗದಲ್ಲಿದ್ದ ತಂತಿ ಬೇಲಿಯನ್ನು ಕಿತ್ತುಹಾಕುವಂತೆ ಉಳಿದ ಆರೋಪಿತರೆಲ್ಲರಿಗೂ ಪ್ರಚೋದಿಸಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ಹಿರಿಸಾವೆ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ನಾನು ಏಕೆ ಈಗೇ ಮಾಡುತ್ತಿದ್ದೀರಿ ಎಂದು ಆರೋಪಿತರನ್ನು ಪ್ರಶ್ನಿಸಿದಾಗ ಆರೋಪಿತರೆಲ್ಲರೂ ಗುದ್ದಲಿ, ಹಾರೆಗಳನ್ನು ತಂದು ಕಲ್ಲು ಕಂಬಗಳನ್ನು ಕಿತ್ತುಹಾಕಿ ನ್ಯಾಯಾಲಯದ ಆದೇಶ ಇದ್ದರೆ ನಮಗೇನಂತೆ ಎಂದು ಅವಾಚ್ಯ ಶಬ್ದಗಳಿಂದ ನನ್ನನ್ನು ಬೈದು, 4ನೇ ಆರೋಪಿ ಅವರ ತಲೆಯಿಂದ ನನ್ನ ಮುಖಕ್ಕೆ ಡಿಕ್ಕಿ ಹೊಡೆದಿರುತ್ತಾರೆ. 1 ಮತ್ತು 2ನೇ ಆರೋಪಿತರು ನನ್ನನ್ನು ಹಿಡಿದು ಎಳೆದಾಡಿರುತ್ತಾರೆ. 6ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದು ವಕೀಲರಾದರೆ ನನಗೇನಂತೆ ಎಂದಿರುತ್ತಾರೆ. ಉಳಿದ ಆರೋಪಿತರೆಲ್ಲರೂ ಸದರಿ ಜಾಗವನ್ನು ಬಿಟ್ಟುಕೊಡದಿದ್ದರೇ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಅಲ್ಲದೇ ನನ್ನ ತಂದೆ ನೆಟ್ಟಿಸಿದ್ದ 9 ಕಲ್ಲು ಕಂಬಗಳನ್ನು ಹೊಡೆದುಹಾಕಿರುತ್ತಾರೆ. ಕಲ್ಲು ಕಂಬಗಳನ್ನು ಹೊಡೆದುಹಾಕಿರುವುದರಿಂದ ನನ್ನ ತಂದೆಗೆ ರೂ. 2,000/- ನಷ್ಟಉಂಟಾಗಿರುತ್ತದೆ. ಆ ಸಮಯದಲ್ಲಿ ಆದರ್ಶ, ಜಲೇಂಧ್ರ, ಕಿರಣ ಮತ್ತು ಕಾರ್ತಿಕ್ ರವರು ಪ್ರತ್ಯಕ್ಷದರ್ಶಿಗಳಾಗಿದ್ದು, ಕಾರ್ತಿಕ್ ರವರು ಕ್ಯಾಮೆರಾದಲ್ಲಿ ವಿಡಿಯೋ ಚಿತ್ರೀಕರಣ ಸಹ ಮಾಡಿರುತ್ತಾರೆ. ಗೇಟ್ ಬಳಿ ನಿಂತಿದ್ದ ನನ್ನ ತಾಯಿಗೂ ಸಹ 1 ಮತ್ತು 2 ನೇ ಆರೋಪಿ ಕೈಯಿಂದ ಗೇಟನ್ನು ತಳ್ಳಿ ಹಲ್ಲೆ ಮಾಡಿರುತ್ತಾರೆ. ನಂತರ ನಾನು ಮತ್ತು ನನ್ನ ತಾಯಿ ಆಂಬುಲೆನ್ಸ್ ನಲ್ಲಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಈ ಸಂಬಂಧ ಫೋಟೋ ಮತ್ತು ವಿಡಿಯೋ ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಅಲ್ಲದೇ 9 ಮತ್ತು 10 ನೇ ಆರೋಪಿತರು ಯಾವುದೇ ನೋಟೀಸ್ ನೀಡದೇ ಏಕಾಏಕಿ ನಮ್ಮ ಮನೆಯ ಒಳಗೆ ಅನುಮತಿ ಇಲ್ಲದೇ ಪ್ರವೇಶಿಸಿ ಅಳತೆ ಮಾಡುವುದಾಗಿ ತಿಳಿಸಿರುತ್ತಾರೆ.

ಸಾಕ್ಷಿ ನ್ಯಾಯಾಲಯದಲ್ಲಿರುವ 5 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-7 ರ ಸಿಡಿಯಲ್ಲಿ ಅಲ್ಲಿ ನಡೆದ ಘಟನೆಯ ಚಿತ್ರೀಕರಣ ಇದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 1,2,5,7 ಮತ್ತು 8ನೇ ಆರೋಪಿ ಪರ ವಕೀಲರಾದ ಶ್ರೀ ಸಿ ಎಸ್ ಡಿ ರವರಿಂದ ಃ**

ನಾನು ರಾತ್ರಿ 9.00 ಗಂಟೆಯವರೆಗೆ ಆಸ್ಪತ್ರೆಯಲ್ಲಿ ಇದ್ದೆ. ನನಗೆ ಮುಖಕ್ಕೆ ಏಟಾಗಿದ್ದು ಕೈ ಕಾಲು ಮತ್ತು ದೇಹದ ಭಾಗಕ್ಕೆ ನೋವುಂಟಾಗಿರುತ್ತದೆ. ನನ್ನ ತಾಯಿಗೆ ಎಡಕೈಗೆ ಪೆಟ್ಟಾಗಿರುತ್ತದೆ. ನಮ್ಮಿಬ್ಬರಿಗೂ ರಕ್ತ ಬರುವಂತ ಗಾಯ ಆಗಿರುವುದಿಲ್ಲ. ದಿಃ 14.08.2013 ರ ಘಟನೆಗೆ ಸಂಬಂಧಿಸಿದಂತೆ ನಾನು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೆ ಎಂದರೆ ಸರಿ. ಸದರಿ ದೂರಿನನ್ವಯ ಆರೋಪಿತರ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ಸಿಸಿ ಸಂಖ್ಯೆ 1419/2013 ರಂತೆ ವಿಚಾರಣೆ ನಡೆಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದೂರು ಖಾಸಗಿ ದೂರಾಗಿ ನಂತರ ಪೋಲೀಸರು ತನಿಖೆಯನ್ನು ಕೈಗೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನನ್ನ ಮತ್ತು ನನ್ನ ತಾಯಿಯ ವಿಚಾರಣೆ ಸಹ ಆಗಿದೆ ಎಂದರೆ ಸರಿ. ಸದರಿ ಪ್ರಕರಣ ಆರೋಪಿತರ ವಿರುದ್ದ ಖುಲಾಸೆಗೊಂಡಿದೆ ಎಂದರೆ ಸರಿ.

ಖಾಲಿ ಜಾಗ ಬಿಟ್ಟುಕೊಂಡಿರುವ ಬಗ್ಗೆ ದಾಖಲೆಗಳು ನಮ್ಮ ಬಳಿ ಇವೆ. ಸದರಿ ಜಾಗವು ಸಾರ್ವಜನಿಕ ರಸ್ತೆ ಎಂದರೆ ಸರಿಯಲ್ಲ. ಸುಮಾರು 25 ವರ್ಷಗಳಿಂದ ಸದರಿ ರಸ್ತೆಯನ್ನು ಸಾರ್ವಜನಿಕರು ಬಳಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾರ್ವಜನಿಕರು ಸದರಿ ರಸ್ತೆಗೆ ಸಂಬಂಧಿಸಿದಂತೆ ನಮ್ಮ ತಂದೆಯ ವಿರುದ್ದ ಸಿವಿಲ್ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ, ಸದರಿ ದಾವೆ ರಸ್ತೆ ಇಲ್ಲ ಎಂದು ವಜಾಗೊಂಡಿದೆ ಎನ್ನುತ್ತಾರೆ. ಸದರಿ ದಾವೆಯು ನ್ಯಾಯಾಲಯಕ್ಕೆ ಹಾಜರಾಗದ ಕಾರಣ

ವಜಾಗೊಂಡಿದೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 38/2008 ರ ದಾವೆಯನ್ನು ರಸ್ತೆಯನ್ನು ಒತ್ತುವರಿ ಮಾಡಿಕೊಳ್ಳುವ ಸಲುವಾಗಿ ಹೂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರನ್ನು ಒಳಗೊಂಡಂತೆ ಇತರ ಸಾರ್ವಜನಿಕರು ಸಹ ರಸ್ತೆ ಇರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೆ ಘಟನೆ ನಡೆದಿಲ್ಲ. ಯಾವುದೇ ಆರೋಪಿ ನನ್ನ ಮತ್ತು ನನ್ನ ತಾಯಿಯ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸ್ವತ್ತಿನಲ್ಲಿರುವ ಯಾವುದೇ ಕಲ್ಲುಕಂಬಗಳನ್ನು ಆರೋಪಿತರು ಹೊಡೆದುಹಾಕಿ ನಷ್ಟಉಂಟುಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 5 ಮತ್ತು 7 ರ ದಾಖಲೆಯನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ನೀಡಿದ್ದೇವೆ ಎಂದರೆ ಸರಿಯಲ್ಲ. ಸದರಿ ರಸ್ತೆ ಸಂಬಂಧ 8ನೇ ಆರೋಪಿ ನನ್ನ ವಿರುದ್ಧ ದೂರು ನೀಡಿದ್ದರು ಎಂದರೆ ಸಾಕ್ಷಿ ಕಾಯಿ ಸುಳಿಯುವ ವಿಚಾರವಾಗಿ ದೂರು ನೀಡಿದ್ದರು ಎನ್ನುತ್ತಾರೆ. ಸದರಿ ರಸ್ತೆಯನ್ನು ಹೊಡೆದುಕೂಳ್ಳುವ ಉದ್ದೇಶದಿಂದ ಸಾರ್ವಜನಿಕರು ಇದನ್ನು ಪ್ರಶ್ನಿಸಿದಾಗ ಈ ರೀತಿಯ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 38/2008 ರಲ್ಲಿ ಯಾವುದೇ ಮಧ್ಯಂತರ ಆದೇಶ ಸಹ ಆಗಿರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3,4 ಮತ್ತು 6 ನೇ ಆರೋಪಿ ಪರ ವಕೀಲರಾದ ಶ್ರೀ ಬಿ ಸಿ ಎಮ್ ರವರಿಂದ ಃ**

3,4 ಮತ್ತು 6 ನೇ ಆರೋಪಿತರಿಗೂ ಆ ರಸ್ತೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 4ನೇ ಆರೋಪಿ ಆ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 6ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 3ನೇ ಆರೋಪಿ ನನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಿಡಿಯೋಗ್ರಾಫರ್ ನ್ನು ನಾನೇ ಕರೆಸಿರುತ್ತೇನೆ .

ರಸ್ತೆಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಆರೋಪಿತರನ್ನು ಪ್ರಚೋದಿಸಿ ವಿಡಿಯೋ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಸದರಿ ಗಲಾಟೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**